ಸಾಕ್ಷಿಯ ಹೆಸರುಃ ಕುಮಾರಸ್ವಾಮಿ ಪಿ.

ದಿನಾಂಕ 22-08-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ ಎಂ.ಸಿ.ಎಸ್. ವಕೀಲರಿಂದಃ

ನಾನು ಬೆಂಗಳೂರಿನಲ್ಲಿ ವಾಸವಾಗಿದ್ದೇನೆ. ನಾನು ಸಾರಿಗೆ ಇಲಾಖೆಯಲ್ಲಿ ಅಧೀಕ್ಷಕರಾಗಿ ಕೆಲಸ ಮಾಡುತ್ತಿದ್ದೇನೆ. ನನಗೆ 2014 ರಲ್ಲಿ ನರಸಿಂಹಮೂರ್ತಿ ಮತ್ತು ರಾಜು ಎಂಬುವವರಿಂದ 1 ಮತ್ತು 2 ನೇ ಪ್ರತಿವಾದಿಯರ ಪರಿಚಯವಾಗಿರುತ್ತದೆ. 1 ಮತ್ತು 2 ನೇ ಪ್ರತಿವಾದಿಯರಿಗೆ ನಾನು ರೂ.14,00,000/-ಗಳನ್ನು ನಗದು ರೂಪದಲ್ಲಿ ಕೊಟ್ಟಿರುತ್ತೇನೆ. 1 ಮತ್ತು 2 ನೇ ಪ್ರತಿವಾದಿಯರು ನಗರದು ರೂಪದಲ್ಲಿ ಹಣ ಬೇಕು ಎಂದು ಹೇಳಿದ್ದರಿಂದ ಡಿ.ಡಿ. ಅಥವಾ ಚೆಕ್ ಮೂಲಕ ನೀಡಿರುವುದಿಲ್ಲ. ದಿನಾಂಕಃ 26.08.2014 ರಂದು ನೊಂದಣಿಯಾಗುವ ದಿನ ಹಣ ನೀಡಿರುತ್ತೇನೆ. ಈ ಹಣವನ್ನು ನಾನು ಬ್ಯಾಂಕಿನಿಂದ ಡ್ರಾ ಮಾಡಿರುವುದಿಲ್ಲ ಮತ್ತು ಮನೆಯಲ್ಲಿ ಇಟ್ಟಿರುವ ಹಣವನ್ನು ನೀಡಿರುತ್ತೇನೆ. ಸಾಮಾನ್ಯವಾಗಿ ಯಾರೂ ಇಷ್ಟು ದೊಡ್ಡದ ಮೊತ್ತದ ಹಣವನ್ನು ಮನೆಯಲ್ಲಿ ಇಟ್ಟುಕೊಳ್ಳುವುದಿಲ್ಲ ಎಂದರೆ ಸಾಕ್ಷಿ ನಾನು ಜಮೀನನ್ನು ಕೊಳ್ಳಲು ಜಮೀನನ್ನು ಹುಡುಕುತ್ತಿದ್ದೆ ಹಾಗೂ ನನ್ನ ಉಳಿತಾಯ ಹಣವನ್ನು ಮನೆಯಲ್ಲಿ ಇಟ್ಟುಕೊಂಡಿದ್ದೆ ಎನ್ನುತ್ತಾರೆ.

2) ನಾನು ಸಾರಿಗೆ ಇಲಾಖೆಯಲ್ಲಿ ಅಧೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ, ಆರ್.ಬಿ.ಐ. ನ ನಿಮಯದ ಪ್ರಕಾರ ರೂ.20,000/- ಕ್ಕಿಂತ ಹೆಚ್ಚಿನ ಹಣ ವ್ಯವಹಾರ ಮಾಡಬೇಕಾದರೆ, ಚೆಕ್ ಮೂಲಕವೇ ಹಣ ನೀಡಬೇಕು ಎಂದು ನನಗೆ ಗೊತ್ತಿರುವುದಿಲ್ಲ. ರೂ.14,00,000/-ಗಳನ್ನು ದಿನಾಂಕಃ 26.08.2014 ರಂದು ನಮ್ಮ ಮನೆಯಲ್ಲಿ ಇಟ್ಟುಕೊಂಡಿದ್ದೆ ಎಂದು ತೋರಿಸಲು ದಾಖಲೆಗಳು ನನ್ನ ಬಳಿ ಇರುವುದಿಲ್ಲ, ಕಾರಣ ಅದು ಉಳಿತಾಯದ ಹಣವಾಗಿರುತ್ತದೆ. ನನಗೆ ತೆಂಗಿನ ತೋಟವಿದ್ದು ಮತ್ತು ಬೆಂಗಳೂರಿನಲ್ಲಿ ಮನೆ ಇದ್ದು, ಅದರ ಬಾಡಿಗೆ ಹಣ ಬರುತ್ತದೆ

ನನ್ನ ಹೆಂಡತಿ ಮತ್ತು ನಾನು ಕೆಲಸದಲ್ಲಿದ್ದು, ನಾವೆಲ್ಲರೂ ಸೇರಿ ಉಳಿತಾಯ ಮಾಡಿದ ಹಣವನ್ನು ಇಟ್ಟುಕೊಂಡಿದ್ದೆ ಎನ್ನುತ್ತಾರೆ. ನನಗೆ ತೆಂಗಿನ ತೋಟ ಮತ್ತು ಜಮೀನು ಇರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ.

3) ನಾವು ನಮ್ಮ ಜಮೀನಿನಲ್ಲಿ ಬಂದ ತೆಂಗಿನ ಕಾಯಿಗಳನ್ನು ಎ.ಪಿ.ಎಂ.ಸಿ. ಗೆ ಮಾರಾಟ ಮಾಡುತ್ತೇವೆ, ಆದರೆ ಎ.ಪಿ.ಎಂ.ಸಿ.ರವರು ರಶೀದಿ ಕೊಡುವುದಿಲ್ಲ. ನಾನು ದಾವಾಸ್ವತ್ತನ್ನು ನೋಡಿರುತ್ತೇನೆ. ದಾವಾಸ್ವತ್ತು ಗುಳುವಿನಹತ್ತಿಗುಪ್ಪೆ ಗ್ರಾಮದಲ್ಲಿದೆ. ದಾವಾಸ್ವತ್ತು ಖುಷ್ಕಿ ಜಮೀನು. ದಾವಾಸ್ವತ್ತಿನ ಚೆಕ್‌ಬಂದ ಪೂರ್ವಕ್ಕೆ ಪಶ್ಚಿಮಕ್ಕೆ ಜಯಮ್ಮ ಮತ್ತು ಅನೀಫ್ ಕುಮಾರ್ ರವರ ಜಮೀನು, ಉತ್ತರಕ್ಕೆ ಜಿ.ಎನ್ ಕುಮಾರ್ ರವರ ಜಮೀನು ಮತ್ತು ದಕ್ಷಿಣಕ್ಕೆ ಬೋರೇಗೌಡರ ಜಮೀನು ಇರುತ್ತದೆ. ಮೂಲತಃ ದಾವಾಸ್ವತ್ತು ಜಯಮ್ಮ ಮತ್ತು ಅವರ ಮಕ್ಕಳದ್ದಾಗಿದೆ. ದಾವಾಸ್ವತ್ತು ಜಯಮ್ಮರವರ ಗಂಡನ ಪಿತ್ರಾರ್ಜಿತ ಸ್ವತ್ತಾಗಿರುತ್ತದೆ. ನಂಜೇಗೌಡರಿಗೆ ಆರು ಜನ ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ದಾವಾಸ್ವತ್ತಿನ ಮೇಲೆ ನಂಜೇಗೌಡರ ಎಲ್ಲ ಮಕ್ಕಳಿಗೆ ಹಕ್ಕು ಇದೆ ಎಂದರೆ ಹೌದು ಅವರೆಲ್ಲರೂ ಆ ದಿನ ಮಾತುಕತೆಗೆ ಬಂದಿದ್ದರು. ಈ ಕ್ರಯದ ಕರಾರು ಪತ್ರಕ್ಕೆ ನಂಜೇಗೌಡರ ಮಕ್ಕಳು ಹಾಗೂ ಮೊಮ್ಮಕ ಸಹಿ ಪಡೆದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಆ ದಿನ ಎಷ್ಟು ಜನ ಬಂದಿದ್ದರು ಅವರ ಸಹಿ ಪಡೆದಿರುತ್ತೇವೆ ಹಾಗೂ ಕ್ರಯಪತ್ರ ನೊಂದಣಿ ಸಮಯದಲ್ಲಿ ಎಲ್ಲರ ಸಹಿ ಮಾಡಿಸಿಕೊಡುವುದಾಗಿ 1 ಮತ್ತು 2 ನೇ ಪ್ರತಿವಾದಿ ಹೇಳಿದ್ದರು. ನಿಪಿ.01 ರಲ್ಲಿ ಈ ಕುರಿತು ಒಕ್ಕಣಿಕೆಯಾಗಿದೆ.

4) ಪ್ರಸನ್ನ ಕುಮಾರ್ ರವರು ಉಳಿದ ಪ್ರತಿವಾದಿಯರು ಹಾಗೂ ನನ್ನ ವಿರುದ್ಧ ದಾವಾಸ್ವತ್ತಿನ ವಿಭಾಗ ಕೋರಿ ಅಸಲು ದಾವಾ ಸಂಖ್ಯೆ 35/2019 ನ್ನು ದಾಖಲಿಸಿರುತ್ತಾರೆ ಎಂದರೆ ಸಾಕ್ಷಿ ಅವರೆಲ್ಲರೂ ಸೇರಿ ಕೊಲ್ಲೂಡ್ ಆಗಿ ನನಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿರುತ್ತಾರೆ ಎನ್ನುತ್ತಾರೆ. ದಾವಾಸ್ವತ್ತಿನ ದಾಖಲೆಗಳನ್ನು ನೋಡಿದಾಗ ಅದು ಒಟ್ಟು ಕುಟುಂಬದ ಆಸ್ತಿಯಾಗಿತ್ತು ಎಂದರೆ ಸರಿ.

ಈ ಹಂತದಲ್ಲಿ 1 ಮತ್ತು 2 ನೇ ಪ್ರತಿವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.